

ರೆಡ್ ಬ್ಯಾಕ್ಡ್ ಶ್ರೈಕ್



ರೆಡ್ ಫೂಟೆಡ್ ಫಾಲ್ಕನ್ ಬಾಯಲ್ಲಿ ಆಹಾರದೊಂದಿಗೆ

ಐಟಿ ಕಂಪನಿಯೊಂದರ ಉದ್ಯೋಗಿ. ವಾರಪೂರ್ತಿ ಅಲ್ಲಿ ಕೆಲಸ ಮಾಡುವ ಆತ ವಾರಾಂತ್ಯದಲ್ಲಿ ಪಕ್ಷಿವೀಕ್ಷಣೆಗೆ ಹೋಗುತ್ತಾನಂತೆ. ಹಲವು ವರ್ಷಗಳ ಅನುಭವ ಆತನಿಗಿತ್ತು. ಪರಸ್ಪರ ಪರಿಚಯವಾದ ಮೇಲೆ ಅವನ ಕಾರಿನಲ್ಲಿ ಕುಳಿತು ಬುಡಾಪೆಸ್ಟ್‌ನ ಸಿರಿವಂತ ಬೀದಿಗಳನ್ನು ದಾಟಿ ನಿಧಾನವಾಗಿ ಕಿಸ್ಕುನ್ ಶಾಗ್ ರಾಷ್ಟ್ರೀಯ ಉದ್ಯಾನವನದೆಡೆ ಹೊರಟೆವು. ಬುಡಾಪೆಸ್ಟ್‌ನಿಂದ ಸುಮಾರು 130 ಕಿಲೋಮೀಟರ್ ದೂರದಲ್ಲಿ, ಡ್ಯಾನ್ಯೂಬ್ ಮತ್ತು ತಿಸಾ ನದಿಗಳ ನಡುವಲ್ಲಿ 570 ಚದರ ಕಿಲೋಮೀಟರ್‌ಗಳಷ್ಟು ವಿಸ್ತಾರವಾಗಿ ಹರಡಿರುವ ಕಿಸ್ಕುನ್ ಶಾಗ್ ರಾಷ್ಟ್ರೀಯ ಉದ್ಯಾನವನ ಯುನೆಸ್ಕೋದಿಂದ 'ಬಯೋಸ್ಫೀರ್ ರಿಸರ್ವ್' ಎಂಬ ಪಟ್ಟ ಪಡೆದಿದೆ. ಕೃಷಿಯನ್ನವಲಂಬಿಸಿದ ಚಿಕ್ಕ ಚಿಕ್ಕ ಹಳ್ಳಿಗಳು, ಗದ್ದೆ ಬಯಲುಗಳು, ಕೆರೆ ಕೊಳ್ಳಗಳು, ಜವುಗು ಪ್ರದೇಶಗಳನ್ನೆಲ್ಲ ತನ್ನೊಳಗೆ ಅಡಗಿಸಿಕೊಂಡಿರುವ ಇದು ಪಕ್ಷಿವೀಕ್ಷಕರಿಗೆ ಸಗ್ಗವೇ ಸರಿ.

ನಮ್ಮ ಕಾರು ಬುಗಿ ಎಂಬೊಂದು ಹಳ್ಳಿಗಾಡಿನ ರಸ್ತೆಯಲ್ಲಿ ಸಾಗುತ್ತಿತ್ತು. ನನ್ನ ಬೈನಾಕ್ಯುಲರ್ ಮೂಲಕ ಕಾಣುವ ಎಲ್ಲ ಪಕ್ಷಿಗಳನ್ನು ಗಮನಿಸುತ್ತಾ ಪುಸ್ತಕದಲ್ಲಿ ಗುರುತು ಹಾಕಿಕೊಳ್ಳುತ್ತಿದ್ದೆ. ಥಟ್ಟನೆ ನನ್ನ ದೃಷ್ಟಿ ವಿದ್ಯುತ್ ಕಂಬಗಳ ಮೇಲೆ ಬಿದ್ದಿತು. ಹೆಚ್ಚೂಕಡಿಮೆ ಎಲ್ಲ ಕಂಬಗಳ ಮೇಲೆಯೂ ಬುಟ್ಟಿಯಷ್ಟು ದೊಡ್ಡ ಗೂಡುಗಳು ಕಂಡವು. ಆ ಗೂಡುಗಳೊಳಗಿಂದ ಆಗಷ್ಟೇ ರೆಕ್ಕೆಪುಕ್ಕ ಬಲಿತು ಹಾರಲು ತಯಾರಿ ಮಾಡಿಕೊಳ್ಳುತ್ತಿದ್ದ ಬಿಳಿ, ಕಪ್ಪು ಬಣ್ಣದ ಹಕ್ಕಿ ಮರಿಗಳು ಇಣುಕುತ್ತಿದ್ದವು. ಅಲ್ಲೊಂದು ಗೂಡಿನಲ್ಲಿ ತಾಯಿ ಹಕ್ಕಿ ತನ್ನ ಮರಿಗಳಿಗೆ ಕೊಕ್ಕಿನಲ್ಲಿ ಏನನ್ನೋ ತಂದು ಗುಟುಕು ನೀಡುತಿತ್ತು. ವೈಟ್ ಸ್ಟಾರ್ಕ್ ಎಂದು ಗುರುತಿಸಲಾಗುವ ಬಿಳಿ ಮೈ, ಕಪ್ಪು ಪುಕ್ಕ, ಕೆಂಪು ಕೊಕ್ಕು ಹಾಗೂ ಕೆಂಪು ಕಾಲುಗಳಿಂದ ಕೂಡಿದ ಸುಂದರವಾದ ಕೊಕ್ಕರೆ ಇದು. ಚಳಿಗಾಲದಲ್ಲಿ ಇವು ಆಫ್ರಿಕಾ ಖಂಡಕ್ಕೆ ವಲಸೆ ಹೋಗುತ್ತವೆ. ಕೆಲವು ನಮ್ಮ ಭಾರತಕ್ಕೂ ಬರುತ್ತವೆ. ಆದರೆ ಪ್ರತಿವರ್ಷ ಬೇಸಗೆಯಲ್ಲಿ ಮೊಟ್ಟೆ ಇಟ್ಟು ಮರಿಮಾಡಲು ಸಾವಿರಾರು ಮೈಲುಗಳನ್ನು ದಾಟಿ ಯೂರೋಪ್‌ಗೆ ಮರಳುತ್ತವೆ. ಅಲ್ಲಿ ಹಲವೆಡೆ ಮನೆಗಳ ಮೇಲ್ಛಾವಣಿಗಳಲ್ಲಿ, ವಿದ್ಯುತ್ ಕಂಬಗಳ ಮೇಲೆಲ್ಲಾ ಅವುಗಳ ಗೂಡುಗಳನ್ನು ಕಾಣಬಹುದು. ಮನುಷ್ಯರ ವಾಸವಿರುವಲ್ಲಿ ರಕ್ಷಣೆ ಸಿಗುವುದರಿಂದಲೋ ಏನೋ, ಮರಿ ಮಾಡಲು ಇಂತಹ ಜಾಗಗಳನ್ನೇ ಆಯ್ಕೆ ಮಾಡಿಕೊಳ್ಳುತ್ತವೆ! ಆ ಹಕ್ಕಿಗಳು ಮಕ್ಕಳನ್ನು ಮನೆಗೆ ತಂದುಕೊಡುತ್ತವೆಂಬ ಪ್ರತೀತಿ ಇರುವುದರಿಂದ ಜನರೂ ಅವುಗಳ ಇರುವಿಕೆಯನ್ನು ಸ್ವಾಗತಿಸುತ್ತಾರೆ.

ಮುಂದೆ ಹೋದಂತೆಲ್ಲ ವೈಟ್ ಥ್ರೋಟ್, ಬಂಟಿಂಗ್, ಸ್ಟಾರ್ಲಿಂಗ್, ಲಾರ್ಕ್ ಮುಂತಾದ ಹಲವು ಪಕ್ಷಿಪ್ರಭೇದಗಳು ನಮಗೆದುರಾದವು. ಕೆಂಪು ಬೆನ್ನಿನ ಕಳಿಂಗ (ರೆಡ್ ಬ್ಯಾಕ್ಡ್ ಶ್ರಯ್ಕ್) ಪಕ್ಷಿಯೊಂದು ಒಂಟಿಯಾಗಿ ಬೋಳುಗಿಡದ ಮೇಲೆ ಕುಳಿತಿತ್ತು. ಈ ಶ್ರಯ್ಕ್ ಪಕ್ಷಿಗಳನ್ನು ನೋಡಿದಾಗೆಲ್ಲ ನನಗೆ ನೆನಪಾಗುವುದು ಅವುಗಳು ಆಹಾರ ಸಂಗ್ರಹಿಸುವ ಪರಿ. ಹುಳಗಳು, ಹಲ್ಲಿ, ಸಣ್ಣ ಹಾವುಗಳು, ಕೆಲವೊಮ್ಮೆ ಬೇರೆ ಹಕ್ಕಿಗಳ ಮರಿಗಳನ್ನೂ ಹಿಡಿದು ಮುಳ್ಳಿನ ಗಿಡಗಳಲ್ಲಿ ಚುಚ್ಚಿಕೊಂಡು ಹಸಿವಾದಾಗ ಸ್ವಲ್ಪ ಸ್ವಲ್ಪವಾಗಿ ಕಿತ್ತು ತಿನ್ನುವ ಅವುಗಳ ಪದ್ಧತಿಯೇ ವಿಚಿತ್ರ. ಅದಕ್ಕಾಗಿಯೇ ವೈಜ್ಞಾನಿಕವಾಗಿ ವರ್ಗೀಕರಿಸುವಾಗ ಅವುಗಳನ್ನು 'ಲಾನಿಯಸ್' ಎಂಬ ಜೀನಸ್ ಕೆಳಗಿಡಲಾಗಿದೆ. ಲ್ಯಾಟಿನ್ ಭಾಷೆಯಲ್ಲಿ ಲಾನಿಯಸ್ ಎಂದರೆ ಕಟುಕ ಎಂಬರ್ಥವಂತೆ. ಆದರೆ ಈ ರೀತಿಯ ಆಹಾರ ಪದ್ಧತಿಗೆ ಬಲವಾದ ಕಾರಣವೂ ಇದೆ. ತನ್ನ ಗೂಡಿನಲ್ಲಿ ಮರಿಗಳಿದ್ದಾಗ ಅವುಗಳ ಹೊಟ್ಟೆ ಹೊರೆಯಲು ಆಹಾರ ಹುಡುಕಿಕೊಂಡು ಬಹುದೂರ ಅಲೆಯುವ ತೊಂದರೆ ತಪ್ಪುತ್ತದಲ್ಲ! ಮರಿಗಳ ರಕ್ಷಣೆಯ ಜವಾಬ್ದಾರಿಯನ್ನು ಪುಟ್ಟ ಹಕ್ಕಿ ಸಮರ್ಥವಾಗಿ ನಿರ್ವಹಿಸುವುದು ಹೀಗೆ.

ಬಿಸಿಲು ನಿಧಾನವಾಗಿ ಏರುತ್ತಿತ್ತು. ಅಲ್ಲೊಂದು ಸಣ್ಣ ಹಳ್ಳದ ಸುತ್ತಲಿದ್ದ ಕೆಂಪು ಮಣ್ಣಿನ ಗದ್ದೆಗಳ ಅಂಚಿನಲ್ಲಿ ಕಡುಗಪ್ಪು ತಲೆಯ, ಅಚ್ಚ ಬಿಳಿ ಮೈ ಬಣ್ಣದ ಪಾರಿವಾಳದ ಗಾತ್ರವಿರುವ ಮೆಡಿಟರೇನಿಯನ್ ಗಲ್ಸ್‌ಗಳಿದ್ದವು. ಮೊದಲು ಮೆಡಿಟರೇನಿಯನ್ ಸಮುದ್ರದ ಸುತ್ತ ಮುತ್ತ ಮಾತ್ರ ಹರಡಿದ್ದ ಅವು ಈಗ ತಮ್ಮ ಸಾಮ್ರಾಜ್ಯವನ್ನು ಒಳನಾಡಿಗೂ ವಿಸ್ತರಿಸಿವೆ. ಯೂರೋಪಿನಲ್ಲಿ ತೀರಾ ಸಾಮಾನ್ಯವಾಗಿ ಕಂಡು ಬರುವ ಇತರ ಗಲ್ ಪ್ರಭೇದಗಳೆಂದರೆ ಬ್ಲಾಕ್ ಹೆಡೆಡ್ ಗಲ್, ಬ್ಲಾಕ್‌ಬ್ಯಾಕ್ಡ್ ಗಲ್, ಮ್ಯೂ ಗಲ್ ಮುಂತಾದವು. ಕನ್ನಡದಲ್ಲಿ ಕಡಲಕ್ಕಿ ಎಂದು ಕರೆಸಿಕೊಳ್ಳುವ ಗಲ್ಸ್‌ಗಳ ಬಣ್ಣದಲ್ಲಿ ಕಪ್ಪು, ಬಿಳಿ, ಬೂದು ಹೊರತಾಗಿ ಅಂತ ವೈವಿಧ್ಯ ಏನಿಲ್ಲ. ಆದರೆ ಇವು ಪ್ರಸಿದ್ಧಿ ಪಡೆದಿರುವುದು ತಮ್ಮ ಅಂದಚಂದಗಳಿಂದಲ್ಲ. ಬದಲಿಗೆ ಮನುಷ್ಯರನ್ನೂ ಸಹ ಹೆದರಿಸಿ ಆಹಾರ ಕಿತ್ತುಕೊಳ್ಳುವ ಜಗಳಗಂಟಿತನದಿಂದ. ಮೊಟ್ಟೆ ಇಟ್ಟು

ವೈಟ್ ಸ್ಟಾರ್ಕ್ ಮರಿಗಳು

